ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನ.ರಾ.ಚೌಕ, ಬೆಂಗಳೂರು-560002

ದಿನಾಂಕ:27-08-2018ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

ವಿಷಯ ಸಂಖ್ಯೆ: ಸಾನ್ಯಾಸ್ಥಾಸ/ಪಿಆರ್/06/2018-19

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಗೆ ಮಂಡಿಸಲಾಗಿರುವ ಟಿಪ್ಪಣಿ

1. 2018-19ನೇ ಸಾಲಿನ ಆಯವ್ಯಯ ಅಂದಾಜುಗಳ ಪುಸ್ತಕದಲ್ಲಿ ಕಲ್ಯಾಣ ವಿಭಾಗದ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ನಿಗದಿಪಡಿಸಿರುವ ಅನುಧಾನಗಳ ವಿವರಗಳು:

ಮಾನ್ಯ ಆಯುಕ್ತರ ರವರ ಟಿಪ್ಪಣಿ ದಿನಾಂಕ:21-08-2018 ರಂತೆ ಉಲ್ಲೇಖಿತ ಆದೇಶಗಳನ್ವಯ 2018-19ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯವು ಉಲ್ಲೇಖ (1)ರಂತೆ ಅನುಮೋದನೆಗೊಂಡಿರುತ್ತದೆ. ಸದರಿ ಆಯವ್ಯಯದಲ್ಲಿ (ಅ) ಶೇ.24.10ರ ಅನುವಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ ಸಲಇ/32/ಪಿಎನ್‌ಜಿ/2015 ದಿನಾಂಕ:30-07-2015 ರಲ್ಲಿ ಸೂಚಿಸಿರುವಂತೆ - ಪರಿಶಿಷ್ಟ ಜಾತಿ ವರ್ಗದವರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡ ವರ್ಗದವರಿಗೆ ಶೇ.6.95 ನಿಗಧಿಪಡಿಸಲಾಗಿದೆ. (ಆ)ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರ ಕಲ್ಯಾಣ ಕಾರ್ಯಕ್ರಮ/ ಕಾಮಗಾರಿಗಳಿಗೆ ಶೇ.7ಕ್ಷ25 ನಿಗಧಿಪಡಿಸಲಾಗಿದೆ (ಇ)ಆರ್ಥಿಕವಾಗಿ ಹಿಂದುಳಿದ ವರ್ಗಗದವರ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು (ಈ)ಸಾಮಾನ್ಯ ವರ್ಗದ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಸಾಮಾನ್ಯ ವರ್ಗ, ಹಿರಿಯ ನಾಗರಿಗೆ ಕಲ್ಯಾಣ ಕಾರ್ಯಕ್ರಮಗಳು, ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು, ಮಹಿಳಾ ವರ್ಗದವರ ಹಾಗೂ ಟ್ರಾನ್ಸ್‌ಜೆಂಡರ್‌ಗಳ ಕಲ್ಯಾಣ ಕಾರ್ಯಕ್ರಮಗಳಿಗೆ 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಚಾಲ್ತಿ ಅನುದಾನದ ವಿವರಗಳನ್ನು ಅನುಬಂಧ-01ರಲ್ಲಿ ಲಗತ್ತಿಸಿದೆ.

2.ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಸಲ್ಲಿಸಿರುವ ಪ್ರಸ್ತಾವನೆಗಳು:

2017-18ನೇ ಸಾಲಿನಲ್ಲಿ ಖರ್ಚಾಗದೇ ಉಳಿದಿರುವ ಅರ್ಜ ಚಾಲ್ತಿ ಅನುದಾನವನ್ನು 2018-19ನೇ ಸಾಲಿಗೆ ನಿಯಮಾವಳಿಯಂತೆ ಮುಂದುವರೆಸುವ ಬಗ್ಗೆ:

2017-18ನೇ ಸಾಲಿನ ಅನುಧಾನದ ಹಂಚಿಕೆ ಮತ್ತು ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳ ಕ್ರಿಯಾಯೋಜನೆಗೆ ದಿನಾಂಕ:10-11-2017ರಂದು ಮಾನ್ಯ ಆಯುಕ್ತರವರ ಅನುಮೋದನೆಯಾಗಿದ್ದು, ಈ ಆಧಾರದ ಮೇಲೆ 2017-18ನೇ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿರುವ ಅನುದಾನಕ್ಕೆ ಅನುಗುಣವಾಗಿ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಸಿದ್ಧತೆ ಮಾಡಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ರೀತಿಯ ಕ್ರಮವಹಿಸಲಾಗುತ್ತಿದ್ದು 2017-18ನೇ ಸಾಲಿನ ಆರ್ಥಿಕ ವರ್ಷ ಈಗಾಗಲೇ ಮುಕ್ತಾಯಗೊಂಡಿದ್ದು ಕಾರ್ಯಕ್ರಮಗಳು ಅನುಷ್ಠಾನದ ಹೊನೆಯ ಹಂತದಲ್ಲಿರುತ್ತವೆ.

ಮೇಲ್ಕಂಡಂತೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮತ್ತು ಮಾನ್ಯ ಆಯುಕ್ತರ ಆದೇಶದಂತೆ 2017-18ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕೇಂದ್ರ/ವಲಯ ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದ್ದು, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಸರಬರಾಜು ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಾಗಿದೆ. ಅಲ್ಲದೇ ನಿಯಮಾನುಸಾರ ಮಾರ್ಗಸೂಚಿಯನ್ವಯ ಟೆಂಡರ್ ರಹಿತ ಕಾರ್ಯಕ್ರಮಗಳಾದ ಶಾಲಾ/ಕಾಲೇಜು ಶುಲ್ಕಗಳ ಮರುಪಾವತಿ ನೀಡುವ ಕಾರ್ಯಕ್ರಮಗಳಿಗೂ ಸಹಾ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಸೌಲಭ್ಯಗಳನ್ನು ವಿತರಿಸುವ ಹಂತದಲ್ಲಿರುತ್ತದೆ. ಆದುದರಿಂದ ಈ ಎಲ್ಲಾ ಕಾರ್ಯಕ್ರಮಗಳನ್ನು 2017-18ನೇ ಸಾಲಿನ ಕ್ರಿಯಾಯೋಜನೆಯಲ್ಲಿನ ಅವಕಾಶಗಳು, ಕಾರ್ಯಕ್ರಮ /ಅನುದಾನದ ಲಭ್ಯತೆಯ ಮೇರೆಗೆ 2018-19ನೇ ಸಾಲಿಗೆ ಮುಂದುವರೆಸಿಕೊಂಡು, ಸದರಿ ಕಾರ್ಯಕ್ರಮಗಳಿಗೆ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

2017-18ನೇ ಸಾಲಿನ ಆಯವ್ಯಯದ ಅನುದಾನದಿಂದ ಮುಂದುವರಿಸಲಾದ ಅರ್ಹ ಉಳಿಕೆ ಅನುದಾನದಲ್ಲಿ ವಚ್ಚ
ಏರಿಸಲು ಅನುಮೋದನೆ ಕೋರಿದೆ.

2018-19ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾಯೋಜನೆ ರೂಪಿಸುವ ಸಂಬಂಧ ಉಲ್ಲೇಖ-5 ರಂತೆ ದಿನಾಂಕ 02-08-2018 ರಂದು ಉಪ ಆಯುಕ್ತರು (ಕಲ್ಯಾಣ)ರವರ ಅಧ್ಯಕ್ಷತೆಯಲ್ಲಿ ಈ ಹಿಂದಿನ ಸಾಲುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ, ಚರ್ಚಿಸಲಾಗಿ ಹೆಚ್ಚು ಬೇಡಿಕೆ ಇರುವ ಕಾರ್ಯಕ್ರಮಗಳನ್ನು ಉಳಿಸಿಕೊಂಡು, ಬೇಡಿಕೆ ಇಲ್ಲದಿರುವ ಕೆಲವು ಕಾರ್ಯಕ್ರಮಗಳನ್ನು ಕೈಬಿಸಲಾಗಿದೆ.

2018-19ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಕೈಬಿಡಲಾಗಿರುವ ಕಾರ್ಯಕ್ರಮಗಳ ವಿವರ

ಕ್ರ.ಸಂ.	ಜೀ-ಕೋಡ್	ಕಾರ್ಯ ಕ್ರಮದ ಹೆಸರು
1.	ಪಿ-2020	ಸಣ್ಣ ಉದ್ದಿಮೆದಾರರಿಗೆ ಸಹಾಯಧನ
2.	ಪಿ-2020	ಎಲ್.ಎಲ್.ಬಿ ಪದವಿ ಹೊಂದಿದ್ದು, ವೃತ್ತಿನಿರತ ವಕೀಲರುಗಳಿಗೆ ಸಹಾಯಧನ ನೀಡುವುದು, ವೃತ್ತಿ ಪ್ರಾರಂಭಿಸಲು ನೋಂದಣಿ ಮಾಡಿದ ವರ್ಷದಲ್ಲಿ ಅರ್ಜಿ ಸಲ್ಲಿಸಿದರೆ ಆನ್‌ಲೈನ್ ಕಾನೂನು ಪುಸ್ತಕ ಭಂಡಾರಕ್ಕೆ 5 ವರ್ಷಗಳ ಅವಧಿಗೆ ನೀಡಬೇಕಾದ ಚಂದಾ ಶುಲ್ಕವನ್ನು ನೇರವಾಗಿ ಪಾವತಿಸುವುದು.
3.	ಪಿ-2020	ವೈಯಕ್ತಿಕ ಅಭ್ಯಾಸ ಪ್ರಾರಂಭಿಸಿರುವ ವೈದ್ಯರಿಗೆ ಪದವಿಯಲ್ಲಿ ತೇರ್ಗಡೆಯಾದ ಅಲೋಪತಿ ವೈದ್ಯ/ ಆಯುರ್ವೇದ/ಹೋಮಿಯೋಪತಿ/ಯುನಾನಿ/ಸಿದ್ಧ ಮತ್ತು ನಿಸರ್ಗ ಚಿಕಿತ್ಸೆ/ಯೋಗ ವೃತ್ತಿ ಪ್ರಾರಂಭಿಸಲು ಅವರವರ ಸಂಬಂಧಪಟ್ಟ ಕೌನ್ಸಿಲ್/ಅಸೋಸಿಯೇಷನ್‌ಗಳಲ್ಲಿ ನೋಂದಾಯಿಸಿಕೊಂಡ ಒಂದು ವರ್ಷದ ಒಳಗಾಗಿ ವೈದ್ಯಕೀಯ ಸಲಕರಣೆ ಪಡೆದುಕೊಳ್ಳಲು ಸಹಾಯಧನ ನೀಡುವುದು.
4.	ಪಿ-2022	ಶಸ್ತ್ರ ಚಿಕಿತ್ಸೆ/ ವೈದ್ಯಕೀಯ ಸೇವೆಗಳು, ದೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಬೀರ ಸ್ವರೂಪದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯ.
5	ಪಿ-2023	ಪ್ರತಿಷ್ಠಿತ ವಸತಿ ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ಬಿಎ/ಬಿಕಾಂ/ಬಿಎಸ್‌ಸಿ ಪದವಿ ವ್ಯಾಸಂಗಮಾಡುವುದರೊಂದಿಗೆ ಕೆಪಿಎಸ್‌ಸಿ/ಯುಪಿಎಸ್‌ಸಿ ಯಿಂದ ನಡೆಸಲಾಗುವ ಸಿವಿಲ್ ಸೇವೆಗಳ ಪರೀಕ್ಷೆಗಳಿಗೆ (KAS/IAS) Integrated courses ಗಳಿಗೆ ತರಭೇತಿ ಪಡೆಯಲು ಆರ್ಥಿಕ ಸಹಾಯ
6.	ಪಿ-1936	ಸಣ್ಣ ಉದ್ದಿಮೆದಾರರಿಗೆ ಸಹಾಯಧನ
7.	ಪಿ-1936	ಎಲ್.ಎಲ್.ಬಿ ಪದವಿ ಹೊಂದಿದ್ದು, ವೃತ್ತಿನಿರತ ವಕೀಲರುಗಳಿಗೆ ಸಹಾಯಧನ ನೀಡುವುದು, ವೃತ್ತಿ ಪ್ರಾರಂಭಿಸಲು ನೋಂದಣಿ ಮಾಡಿದ ವರ್ಷದಲ್ಲಿ ಅರ್ಜಿ ಸಲ್ಲಿಸಿದರೆ ಆನ್‌ಲೈನ್ ಕಾನೂನು ಪುಸ್ತಕ ಭಂಡಾರಕ್ಕೆ 5 ವರ್ಷಗಳ ಅವಧಿಗೆ ನೀಡಬೇಕಾದ ಚಂದಾ ಶುಲ್ಕವನ್ನು ನೇರವಾಗಿ ಪಾವತಿಸುವುದು.
8.	ಪಿ-1936	ವೈಯಕ್ತಿಕ ಅಭ್ಯಾಸ ಪ್ರಾರಂಭಿಸಿರುವ ವೈದ್ಯರಿಗೆ ಪದವಿಯಲ್ಲಿ ತೇರ್ಗಡೆಯಾದ ಅಲೋಪತಿ ವೈದ್ಯ/ ಆರ್ಯುರ್ವೇದ/ಹೋಮಿಯೋಪತಿ/ಯುನಾನಿ/ಸಿದ್ಧ ಮತ್ತು ನಿಸರ್ಗ ಚಿಕಿತ್ಸೆ/ಯೋಗ ವೃತ್ತಿ ಪ್ರಾರಂಭಿಸಲು ಅವರವರ ಸಂಬಂಧಪಟ್ಟ ಕೌನ್ಸಿಲ್/ಅಸೋಸಿಯೇಷನ್‌ಗಳಲ್ಲಿ ನೋಂದಾಯಿಸಿಕೊಂಡ ಒಂದು ವರ್ಷದ ಒಳಗಾಗಿ ವೈದ್ಯಕೀಯ ಸಲಕರಣೆ ಪಡೆದುಕೊಳ್ಳಲು ಸಹಾಯಧನ ನೀಡುವುದು.
9.	ಪಿ-1936	ಶಸ್ತ್ರ ಚಿಕಿತ್ಸೆ/ ವೈದ್ಯಕೀಯ ಸೇವೆಗಳು, ದೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಬೀರ ಸ್ವರೂಪದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯ.
10.	ಪಿ-1936	ಪಿ.ಎಚ್.ಡಿ/ಎಂ.ಫಿಲ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಂಶೋಧನಾ ಪ್ರಬಂಧಗಳನ್ನು ಮಂಡಿಸಲು ಪ್ರತಿಷ್ಠಿತ ಸಂಸ್ಥೆಗಳಿಂದ ಆಯೋಜಿಸುವ ಸಮ್ಮಾವೇಶ/ಕಾರ್ಯಗಾರೆಗಳಲ್ಲಿ ಭಾಗವಹಿಸಲು ನಾಸ್ತವಿಕ ವೆಚ್ಚವನ್ನು ಭರಿಸುವುದು.
11.	ಪಿ-1936	8ನೇ ತರಗತಿಯಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಬೈಸಿಕಲ್ ವಿತರಣೆ

ಅಧ್ಯಕ್ಷರು
ಸಾಮಾಜಿಕ

12.	ಪಿ-1936	ಅಭಿವೃದ್ಧಿ ಉಪಯುಕ್ತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು(ನಲ್ಕ್ ಯೋಜನೆಯ ಮಾರ್ಗಸೂಚಿನ್ವಯ ಸಕ್ಷಮ ಪಾಧಿಕಾರದ ಅನುಮೋದನೆಯೊಂದಿಗೆ ತರಬೇತಿಯನ್ನು ನೀಡಲು ಕ್ರಮ ವಹಿಸುವುದು.
13.	ಪಿ-3313	ಒಳಚರಂಡಿ ಸ್ವಚ್ಚಗೊಳಿಸುವಾಗ ಅಪಘಾತವಾದ ವ್ಯಕ್ತಿಗಳು ಮರಣ ಹೊಂದಿದ್ದಲ್ಲಿ ಸರ್ಕಾರ
		ನಿಗದಿಪಡಿಸಿರುವ ಪರಿಹಾರ ಮೊತ್ತವನ್ನು ಭರಿಸುವುದು.

2018-19ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಹೊಸದಾಗಿ ಸೇರ್ಪಡೆ ಮಾಡಿರುವ ಕಾರ್ಯಕ್ರಮಗಳ ವಿವರ

ಕ್ರ.ಸಂ.	ಪಿ-ಕೋಡ್	ಕಾರ್ಯ ಕ್ರಮದ ಹೆಸರು
1	ಪಿ-2022	ಬ್ಯೂಟಿ ಪಾರ್ಲರ್ ತರಬೇತಿ ಪಡೆಯಲು/ವೃತ್ತಿ ಪ್ರಾರಂಭಿಸಲು ಧನಸಹಾಯ
	ಪಿ-2022	ಫ್ಯಾಷನ್ ಡಿಸೈನಿಂಗ್ ತರಬೇತಿ ಪಡೆಯಲು/ವೃತ್ತಿ ಪ್ರಾರಂಭಿಸಲು ಗರಿಷ್ಠ ರೂ 50,000/- ಗಳ ಧನಸಹಾಯ
2	ಪಿ-1938	ಸರ್ಕಾರಿ ಆಥವಾ ಪಾಸಗಿ ಶಾಲಾ/ಕಾಲೇಜುಗಳಲ್ಲಿ 1ನೇ ತರಗತಿಯಿಂದ ಪದವಿವರೆಗೆ ವ್ಯಾಸಂಗ ಮಾಡುತ್ತಿರುವ ವಿಶೇಷಚೇತನ ವಿದ್ಯಾರ್ಥಿಗಳಿಗೆ ಹಾಗೂ ವಿಶೇಷ ಚೇತನರ ಕುಟುಂಬದ ಒಂದು ಮಗ ಅಥವಾ ಮಗಳಿಗೆ ಶುಲ್ಕ ಮರುಪಾವತಿ (ಪಾವತಿಸಿರುವ ಬೋಧನಾ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಮೊತ್ತ ಗರಿಷ್ಠ ರೂ.50,000/-ಮೀರದಂತೆ)
3	ಪಿ-1938	ವಿಶೇಷಚೇತನರಿಗೆ Automated Wheel Chair ವಿತರಿಸುವುದು
4	ಪಿ-1938	Solar Powered Petty Shop
5	ಪಿ-1938	ಅಂಗವಿಕಲರ ಹಕ್ಕುಗಳ ಕಾಯ್ದೆ 2016ರ ಅನ್ವಯ ಗುರುತಿಸಿರುವ 21 ಅಂಗವೈಕಲ್ಯಗಳನ್ನು ಸರಿಪಡಿಸುವ ಸಲುವಾಗಿ ನಡೆಸುವ ಶಸ್ತ್ರ ಚಿಕಿತ್ಸೆಗೆ ಗರಿಷ್ಠ ರೂ.50,000/-ಗಳ ವರೆಗೆ ಧನಸಹಾಯ
6	ಪಿ-1938	ಬುದ್ಧಿಮಾಂದ್ಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಹಾಯ
	ಪಿ-1938	ಈಗಾಗಲೇ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನ ಬಳಕೆಯಾಗದೆ ಉಳಿದಿದ್ದಲ್ಲಿ ಒಟ್ಟಾರೆ ಸದರಿ ಪಿ-ಕೋಡ್‌ನ ಶೇ.20ರಷ್ಟು ಅನುದಾನವನ್ನು ಪಾಲಿಕೆಯ ಕಟ್ಟಡಗಳಲ್ಲಿ ರ್ಯಾಂಪ್ ನಿರ್ಮಿಸುವುದು, ಪಾಲಿಕೆಯ ಪಾರ್ಕ್‌ಗಳಲ್ಲಿ ವಿಕಲಚೇತನರ ಉಪಯೋಗಕ್ಕಾಗಿ ಪ್ರತ್ಯೇಕ ಶೌಚಾಲಯ ನಿರ್ಮಿಸುವುದು ಹಾಗೂ ಇತರ ವಿಕಲಚೇತನ ಸ್ನೇಹಿ ಕಾಮಗಾರಿಗಳನ್ನು CPWD ಮಾರ್ಗಸೂಚಿಯಂತೆ ಕೈಗೊಳ್ಳುವುದು (ಕಾಮಗಾರಿ ವಿಭಾಗದಿಂದ ನಿರ್ವಹಿಸುವುದು)
8	ಪಿ-1938	ಶೇ.75 ಕ್ಕಿಂತ ಹೆಚ್ಚು ಅಂಗವೈಕಲ್ಯಹೊಂದಿರುವ ವಿಶೇಷ ಚೇತನರ ಕುಟುಂಬದ ಒಬ್ಬ ಸದಸ್ಯರಿಗೆ ಸ್ವಯಂ ಉದ್ಯೋಗಕ್ಕಾಗಿ ರೂ. 80,000 ದಿಂದ ರೂ. 1,00000/- ಗಳ ವರೆಗೆ ಆರ್ಥಿಕ ಸಹಾಯ.
9	ಪಿ-1938	ಶೇ.45 ಕ್ಕಿಂತ ಹೆಚ್ಚು ವಿಕಲತೆ ಹೊಂದಿರುವ ಪೋಷಕರ ಮಕ್ಕಳಿಗೆ ಹಾಗೂ ವಿಶೇಷ ಚೇತನರ ಔಪಚಾರಿಕ ಹಾಗೂ ಅನೌಪಚಾರಿಕ (Formal & Nonformal) ಶಿಕ್ಷಣಕ್ಕಾಗಿ ಗರಿಷ್ಠ ರೂ.50,000/- ಗಳ ಆರ್ಥಿಕ ಸಹಾಯ
10	ಪಿ-1938	ದೈಹಿಕ ವ್ಯಾಯಮ (Physiotheropy) ಮತ್ತು ಮಾತಿನ ವ್ಯಾಯಮಕ್ಕೆ (Speechtheropy) ಗಾಗಿ ಸಹಾಯ ಧನ

2018-19ನೇ ಸಾಲಿನ ಕ್ರಿಯಾಯೋಜನೆ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿರುವ ಶೇ.24.10ರ ಅನುದಾನದಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿ ಕಾಯ್ದಿರಿಸಿರುವ ಅನುದಾನವನ್ನು ಈ ಹಿಂದಿನ ಸಾಲುಗಳಂತೆ 2018-19ನೇ ಸಾಲಿನಲ್ಲಿಯೂ ಸಹಾ ಆಯಾ ವಾರ್ಡ್‌ಗಳಲ್ಲಿ ವಾಸವಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಗೆ ಅನುಗುಣವಾಗಿ ಪಾಲಿಕೆಯ ಏಳೂ ಏಳು ವಲಯಗಳ 198 ವಾರ್ಡ್‌ಗಳಿಗೆ ಹಂಚಿಕೆ ಮಾಡಲು ಅನುಮೋದನೆ ಮಾಡಲಾಗಿದೆ.

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 2011ರ SECC ಜನಗಣತಿಯ ವರದಿಯನ್ನು 2015 ನೇ ಸಾಲಿನಲ್ಲಿ ಲೋಕಾರ್ಪಣೆ ಮಾಡಲಾಗಿದ್ದು, ಸದರಿ ವರದಿಯನ್ವಯ ಪಾಲಿಕೆಯ 2018-19ನೇ ಸಾಲಿನ ಶೇ.24.10ರ ಅನುಧಾನದಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಯ ಅನುಗುಣವಾಗಿ ಕಲ್ಯಾಣ ಕಾರ್ಯಕ್ರಮಗಳು, ಮಸತಿ(ಒಂಟಿ ಮನೆ ನಿರ್ಮಾಣ) ಹಾಗೂ ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗೆ ಚಾಲ್ತಿ ಅನುದಾನವನ್ನು ವಲಯವಾರು ಹಂಚಿಕೆ ಮಾಡಿರುವ ವಿವರವನ್ನು ಅನುಬಂಧ-02 ರಲ್ಲಿ ಹಾಗೂ ಸದರಿ ಅನುದಾನವನ್ನು ಎಲ್ಲಾ 198 ವಾರ್ಡ್‌ಗಳಿಗೆ ವಾರ್ಡ್‌ವಾರು ಹಂಚಿಕೆ ಮಾಡಿರುವ ವಿವರವನ್ನು ಅನುಬಂಧ-03 ರಲ್ಲಿ ಲಗತ್ತಿಸಲಾಗಿದೆ.

2018-19ನೇ ಸಾಲಿನ ಆಯವ್ಯಯದಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳು, ಆರ್ಥಿಕವಾಗಿ ಹಿಂದುಳಿದ ವರ್ಗಗದವರ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳು, ಸಾಮಾನ್ಯ ವರ್ಗದ ಅಡಿಯಲ್ಲಿ ಹಿರಿಯ ನಾಗರಿಕರು, ಅಂಗವಿಕಲರು, ಮಹಿಳಾ ವರ್ಗದವರ ಹಾಗೂ ಟ್ರಾನ್ಸ್‌ಜೆಂಡರ್‌ಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಚಾಲ್ತಿ ಅನುದಾನವನ್ನು ಪಿ-ಕೋಡ್ ವಾರು ಎಲ್ಲಾ 198 ವಾರ್ಡ್‌ಗಳಿಗೆ ವಲಯವಾರು ಸಮಾನಾಂತರವಾಗಿ ಹಂಚಿಕೆ ಮಾಡಲಾಗಿದೆ.(ವಿವರವನ್ನು ಅನುಬಂಧ-04ರಲ್ಲಿ ಲಗತ್ತಿಸಿದೆ).

ರಾತ್ರಿ ತಂಗುದಾಣಗಳ ನಿರ್ಮಾಣ ಮತ್ತು ನಿರ್ವಹಣೆ ಕಾರ್ಯಕ್ರಮ:- ಲೆಕ್ಕ ಶೀರ್ಷಿಕೆ-2583 ರ ಅಡಿಯಲ್ಲಿ ರೂ.250.00 ಲಕ್ಷಗಳನ್ನು ನಿಗಧಿಪಡಿಸಿದ್ದು, ಎಲ್ಲಾ 8 ವಲಯಗಳಿಗೆ ಸಮನಾಂತರವಾಗಿ ಹಂಚಿಕೆ ಮಾಡಲಾಗಿದೆ.(ವಿವರವನ್ನು ಅನುಬಂಧ-04ರಲ್ಲಿ ಲಗತ್ತಿಸಿದೆ)

ಬೀದಿ ಬದಿ ವ್ಯಾಪಾರಕ್ಕೆ ಸ್ಥಳದ ಅಭಿವೃದ್ಧಿ ಕಾರ್ಯಕ್ರಮ:- ಈ ಕಾರ್ಯಕ್ರಮವನ್ನು ಹೊಸದಾಗಿ ಸೇರ್ಪಡೆಗೊಳಿಸಿದ್ದು, ಲೆಕ್ಕ ಶೀರ್ಷಿಕೆ-3432 ರ ಅಡಿಯಲ್ಲಿ ರೂ.200.00 ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಕಾರ್ಯಕ್ರಮವನ್ನು ನಲ್ಮ್ ಯೋಜನೆಯ ಮಾರ್ಗಸೂಚಿ ಮತ್ತು ಸುತ್ತೋಲೆಗಳಂತೆ ಕ್ರಮ ವಹಿಸುವುದು.

ಪಾಲಿಕೆ ವತಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ವೈಯಕ್ತಿಕ ಮನೆ ನಿರ್ಮಾಣಕ್ಕಾಗಿ ಹೊಂದಾಣಿಕೆ ಮೊತ್ತ: ಈ ಮೇಲ್ಕಂಡ ಯೋಜನೆ ಪಿ:ಕೋಡ್-3149 ಅಡಿಯಲ್ಲಿ ರೂ.1000-00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿರುವುದರಿಂದ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ರವರ ಸಹಕಾರದೊಂದಿಗೆ ವಿಶೇಷ ಆಯುಕ್ತರು (ಯೋಜನೆ)ರವರು ಯೋಜನೆಯನ್ನು ರೂಪಿಸಿಕೊಂಡು ಅನುಷ್ಠಾನಗೊಳಿಸುವುದು.

2018-19 ನೇ ಸಾಲಿನ ಆಯವ್ಯಯದಲ್ಲಿನ ಲೆಕ್ಕ ಶೀರ್ಷಿಕೆ ಪಿ-3149, ಪಿ-2021, ಪಿ-1878, ಪಿ-3431, ಪಿ-3553, ಪಿ-3554, ಪಿ-3555, ಪಿ-3556, ಪಿ-3557, ಪಿ-3496, ಪಿ-3497, ಪಿ-3511, ಪಿ-2652, ಪಿ-3409, ಪಿ-2340, ಪಿ-3444, ಪಿ-3157, ಪಿ-3542, ಪಿ-3160, ಪಿ-3410, ಪಿ-3286, ಪಿ-3288 ಗಳ ಅಡಿಯಲ್ಲಿ ನಿಗಧಿಪಡಿಸಿರುವ ಚಾಲ್ತಿ ಅನುದಾನಕ್ಕೆ ಸಂಬಂಧಿಸಿದಂತೆ ಪ್ರಧಾನ ಅಭಿಯಂತರರು, ಕಾಮಗಾರಿ ವಿಭಾಗದಿಂದ ವಾರ್ಡ್‌ವಾರು ಪ್ರಸ್ತಾವನೆಗಳನ್ನು ಒಳಗೊಂಡ ವಲಯವಾರು ಕಾಮಗಾರಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ, ನಿಯಮಾನುಸಾರ ಮಾರ್ಗಸೂಚಿಗಳನ್ವಯ ಎಲ್ಲಾ ರೀತಿಯ ಕ್ರಮ ಕೈಗೊಂಡು, ವಿಶೇಷ ಆಯುಕ್ತರು(ಯೋಜನೆ)ರವರ ಮುಖಾಂತರ ಸಾ.ನ್ಯಾ.ಸ್ಥಾ.ಸಮಿತಿಯ ಅನುಮೋದನೆ ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳುವುದು

ಈ ಮೇಲ್ಕಂಡಂತೆ 2018-19ನೇ ಸಾಲಿನ ಆಯವ್ಯಯದ ಅಂದಾಜಿನಲ್ಲಿ ಚಾಲ್ತಿ ಕಲ್ಯಾಣ ಕಾರ್ಯಕ್ರಮಗಳ ವಿವಿಧ ಲೆಕ್ಕಶೀರ್ಷಿಕೆಯಡಿ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಅಪರ/ಜಂಟಿ ಆಯುಕ್ತರುಗಳು ವಲಯ ಮಟ್ಟದಲ್ಲಿ ಕಾರ್ಯಕ್ರಮಗಳಿಗೆ ವಾರ್ಡ್‌ವಾರು ಆರ್ಥಿಕ ಮತ್ತು ಭೌತಿಕ ಗುರಿಯನ್ನು ನಿಗಧಿಪಡಿಸಿಕೊಂಡು ಕ್ರಿಯಾಯೋಜನೆಯನ್ನು ಸಿದ್ಧಪಡಿಸಿಕೊಂಡು ಮಾನ್ಯ ಆಯುಕ್ತರವರ ಅನುಮೋದನೆ ಪಡೆದು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

ವಿವಿಧ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳನ್ನು 2018-19ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡು ಸರ್ಕಾರದ ನಗರಾಢಳಿತ ಇಲಾಖೆ ರವರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರಿಗೆ ಸಂಬಂಧಿಸಿದ ಸುತ್ತೋಲೆ ಸಂಖ್ಯೆ:ನಅಇ/37/ಪಿಎನ್‌ಜಿ/2015 ದಿನಾಂಕ:30/07/2015, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರಿಗೆ ಸಂಬಂಧಿಸಿದ ಸುತ್ತೋಲೆ ಸಂಖ್ಯೆ:ನಅಇ/43/ಪಿಎನ್‌ಜಿ/2015 ದಿನಾಂಕ:29/03/2016, ವಿಶೇಷ ಚೇತನ ವರ್ಗದವರಿಗೆ ಸಂಬಂಧಿಸಿದ ಸುತ್ತೋಲೆ ಸಂಖ್ಯೆ:ನಅಇ/39/ಪಿಎನ್‌ಜಿ/2015 ದಿನಾಂಕ: 09/10/2015

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು

ಗಳಲ್ಲಿ ಸೂಚಿಸಿರುವ ಮಾರ್ಗಸೂಚಿಗಳಂತೆ ಅನುಷ್ಠನಗೊಳಿಸಲು ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರು ಕ್ರಮ ೈಗೊಳ್ಳುವುದು.

ಕಲ್ಯಾಣ ಕಾರ್ಯಕ್ರಮಗಳನ್ನು ನಿಗಧಿತ ಅವಧಿಯಲ್ಲಿ ಅನುಷ್ಠಾನಗೊಳಿಸಲು ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರುಗಳನ್ನು ಅನುಷ್ಠಾನಾಧಿಕಾರಿಗಳಾಗಿ ಹಾಗೂ ಉಪ ಆಯುಕ್ತರುಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ.

ಕಾಮಗಾರಿ ಕಾರ್ಯಕ್ರಮಗಳ ಅಡಿಯಲ್ಲಿ ಅನುದಾನದಡಿಯಲ್ಲಿನ ಮನೆ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರುಗಳನ್ನು ಅನುಷ್ಠಾನಾಧಿಕಾರಿಗಳಾಗಿ ಹಾಗೂ ಎಲ್ಲಾ ವಲಯಗಳ ಮುಖ್ಯ ಅಭಿಯಂತರರನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ.

2018–19ನೇ ಸಾಲಿನ ವಿವಿಧ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಅನುಷ್ಠಾನಾಧಿಕಾರಿಗಳು ಸಾರ್ವಜನಿಕ ಪತ್ರಿಕಾ ಪ್ರಕಟಣೆ ಮುಖಾಂತರ ಅರ್ಜಿ ಆಹ್ವಾನಿಸಿ, ನಿಯಮಾನುಸಾರ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳಿಗೆ ವಿತರಿಸುವ ಸಲಕರಣೆ/ಸವಲತ್ತುಗಳಿಗೆ ವಲಯ ಮಟ್ಟದಲ್ಲಿ ಟಿಂಡರ್ ಪ್ರಕ್ರಿಯೆಯನ್ನು ಕೈಗೊಂಡು ನಿಯಮಾನುಸಾರ ಅಧಿಕಾರ ಪ್ರತ್ಯಾಯೋಜನೆಯಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು ಕ್ರಮ ಕೈಗೊಳ್ಳುವುದು.

ಕಲ್ಯಾಣ ಕಾರ್ಯಕ್ರಮಗಳನ್ನು ಶೀಘ್ರ ಅನುಷ್ಠಾನಗೊಳಿಸುವ ಉದ್ದೇಶದಿಂದ ಟೆಂಡರ್ ರಹಿತ ಕಲ್ಯಾಣ ಕಾರ್ಯಕ್ರಮಗಳನ್ನು ಮಾರ್ಗಸೂಚಿಯನ್ವಯ ನಿಯಮಾನುಸಾರ ಅಧಿಕಾರ ಪ್ರತ್ಯಾಯೋಜನೆಯನ್ವಯ ಅಪರ/ಜಂಟಿ ಆಯುಕ್ತರು ವಲಯ ಮಟ್ಟದಲ್ಲಿ ಕೈಗೊಳ್ಳುವುದು.

ಸರ್ಕಾರದ ನಗರಾಡಳಿತ ಇಲಾಖೆಯಲ್ಲಿ ಲಭ್ಯವಿಲ್ಲದೇ ಪಾಲಿಕೆಯ ವ್ಯಾಪ್ತಿಯಲ್ಲಿ ಹೆಚ್ಚಿನ ಬೇಡಿಕೆ ಇರುವ ಕೆಲವು ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳನ್ನು ಅನುಷ್ಠನಗೊಳಿಸಲು ಹಾಗೂ ಸದರಿ ಯೋಜನೆಗಳಿಗೆ ಈಗಾಗಲೇ ಹಿಂದಿನ ಸಾಲುಗಳಲ್ಲಿ ಪಾಲಿಕೆಯಿಂದ ಹೊರಡಿಸಿರುವ ಮಾರ್ಗಸೂಚಿಗಳಂತೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

ಪಾಲಿಕೆಯ ನೈರ್ಮಲ್ಯ ವಿಭಾಗದಲ್ಲಿ ಖಾಯಂ ಹಾಗೂ ಹೊರಗುತ್ತಿಗೆ ಮೇರೆಗೆ ಕಾರ್ಯನಿರ್ವಹಿಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ಪೌರಕಾರ್ಮಿಕರು, ಸಫಾಯಿ ಕರ್ಮಚಾರಿಗಳು/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಗಳಿಗೆ ಕಲ್ಯಾಣ ಕಾರ್ಯಕ್ರಮಗಳಲ್ಲಿ ಆದ್ಯತೆ ನೀಡುವುದು.

ವಲಯ ಮಟ್ಟದ ಕ್ರಿಯಾಯೋಜನೆಯ ಯಾವುದೇ ಒಂದು ಲೆಕ್ಕ ಶೀರ್ಷಿಕೆಗಳಡಿ ನಿಗಧಿಪಡಿಸಿರುವ ಕಾರ್ಯಕ್ರಮದ ಅನುಧಾನವು ಬಳಕೆಯಾಗದೇ ಇದ್ದಲ್ಲಿ, ಸೂಕ್ತ ಕಾರಣದೊಂದಿಗೆ ಅದೇ ಲೆಕ್ಕ ಶೀರ್ಷಿಕೆಯ ಇತರ ಯಾವುದೇ ಕಾರ್ಯಕ್ರಮಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಮಾನ್ಯ ವಿಶೇಷ/ಅಪರ ಆಯುಕ್ತರು (ಕಲ್ಯಾಣ)ರವರ ಅನುಮೋದನೆಯೊಂದಿಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಸಲು ಅಪರ/ಜಂಟಿ ಆಯುಕ್ತರುಗಳು ಕ್ರಮ ಕೈಗೊಳ್ಳುವುದು.

ವಲಯ ಮಟ್ಟದ ಕ್ರಿಯಾಯೋಜನೆಯ ಯಾವುದೇ ಒಂದು ಲೆಕ್ಕ ಶೀರ್ಷಿಕೆಗಳಡಿ ನಿಗಧಿಪಡಿಸಿರುವ ಅನುಧಾನವು ಬಳಕೆಯಾಗದೇ ಇರುವ ಅನುದಾನವನ್ನು ಇತರ ಲೆಕ್ಕ ಶೀರ್ಷಿಕೆಯಡಿ ಹೆಚ್ಚು ಬೇಡಿಕೆ ಇರುವ ಕಾರ್ಯಕ್ರಮಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಮಾನ್ಯ ಆಯುಕ್ತರ ಅನುಮೋದನೆಯೊಂದಿಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ಅನುಮೋದನೆಯೊಂದಿಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ವಲಯ ಅಪರ/ಜಂಟಿ ಆಯುಕ್ತರು ಬಗ್ಗೆ ಅನುಮೋದನೆ ಕೋರಿದೆ.

ಪ್ರತಿ ತಿಂಗಳು ವಲಯವಾರು ಪ್ರಗತಿಯ ವರದಿಯನ್ನು ನಿಗಧಿತ ನಮೂನೆಗಳಲ್ಲಿ ವಾರ್ಡ್ ಮತ್ತು ವಲಯವಾರು ಎಲ್ಲಾ ಕಲ್ಯಾಣ ಕಾರ್ಯಕ್ರಮಗಳ ಮತ್ತು ಕಾಮಗಾರಿಗಳ ಒಟ್ಟಾರೆ ಪ್ರಗತಿಯ ವರದಿಯನ್ನು ಕ್ರೋಢೀಕರಿಸಿ ತಪ್ಪದೇ ಕೇಂದ್ರ ಕಛೇರಿಗೆ ಸಲ್ಲಿಸುವುದು ಹಾಗೂ ಮೇಲಧಿಕಾರುಗಳು ಕರೆಯುವ ಸಭೆಗೆ ಅಗತ್ಯ ಮಾಹಿತಿ/ವಿವರದೊಂದಿಗೆ ಹಾಜರಾಗಲು ಅಪರ/ಜಂಟಿ ಆಯುಕ್ತರು, ಉಪ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಸಹಾಯಕ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದೆ.

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿಗಳು ಮತ್ತು ಆದೇಶಗಳು

ಸಂಖ್ಯೆ

ಪ್ರತಿ ತಿಂಗಳು ವಲಯವಾರು ಪ್ರಗತಿಯ ವರದಿಯನ್ನು ನಿಗಧಿತ ನಮೂನೆಗಳಲ್ಲಿ ವಾರ್ಡ್ ಮತ್ತು ವಲಯವಾರು ಎಲ್ಲಾ ಕಲ್ಯಾಣ ಕಾರ್ಯಕ್ರಮಗಳ ಮತ್ತು ಕಾಮಗಾರಿಗಳ ಒಟ್ಟಾರೆ ಪ್ರಗತಿಯ ವರದಿಯನ್ನು ಕ್ರೋಢೀಕರಿಸಿ ತಪ್ಪದೇ ಕೇಂದ್ರ ಕಛೇರಿಗೆ ಸಲ್ಲಿಸುವುದು ಹಾಗೂ ಮೇಲಧಿಕಾರಿಗಳು ಕರೆಯುವ ಸಭೆಗೆ ಅಗತ್ಯ ಮಾತಹಿತಿ/ವಿವರದೊಂದಿಗೆ ಹಾಜರಾಗಲು ಅಪರ/ಜಂಟಿ ಆಯುಕ್ತರು, ಉಪ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಸಹಾಯಕ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದೆ.

2018-19ನೇ ಸಾಲಿನ ಕ್ರಿಯಾಯೋಜನೆ ರೂಪಿಸುವ ಸಂಬಂಧ ಮೇಲೆ ವಿವರಿಸಿರುವ ಎಲ್ಲಾ ಅಂಶಗಳನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅವಗಾಹನೆಗೆ ತರುತ್ತಾ:-

2018-19ನೇ ಸಾಲಿನ ಶೇ.24.10% ರ ಅನುದಾನದಡಿಯ (ಅ)ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಕಲ್ಯಾಣ ಕಾರ್ಯಕ್ರಮಗಳು,ಕಾಮಗಾರಿಗಳು, ವಸತಿ(ಒಂಟಿ ಮನೆ) ನಿರ್ಮಾಣ, (ಆ)ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ಕಲ್ಯಾಣ ಕಾರ್ಯಕ್ರಮಗಳು/ವಸತಿ ನಿರ್ಮಾಣ/ಕಾಮಗಾರಿಗಳು (ಇ)ಆರ್ಥಿಕವಾಗಿ ಹಿಂದುಳಿದ ವರ್ಗದ ಕಲ್ಯಾಣ ಕಾರ್ಯಕ್ರಮಗಳು/ವಸತಿ ನಿರ್ಮಾಣ/ಕಾಮಗಾರಿಗಳು (ಈ)ಸಾಮಾನ್ಯ ವರ್ಗದ ಅಡಿಯಲ್ಲಿ ಹಿರಿಯ ನಾಗರಿಕರು, ಅಂಗವಿಕಲರು, ಮಹಿಳಾ ವರ್ಗದವರು ಹಾಗೂ ಟ್ರಾನ್ಸ್‌ಜೆಂಡರ್‌ಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಅನುಷ್ಠಾನಗೊಳಿಸಬೇಕಾದ ಕಲ್ಯಾಣ ಕಾರ್ಯಕ್ರಮಗಳ ಹಾಗೂ ಕಾಮಗಾರಿಗಳ ಅನುದಾನದ ಹಂಚಿಕೆ ಹಾಗೂ ಕ್ರಿಯಾಯೋಜನೆಯನ್ನು ಅನುಮೋದಿಸಲು ಕೋರಿ ಟಿಪ್ಪಣಿಯನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

ಲಗತ್ತುಗಳು: ಅನುಬಂಧ-1: 2018-19 ನೇ ಸಾಲಿನ ಶೇ.24.10% ರ ಅನುದಾನದ ಕ್ರಿಯಾಯೋಜನೆ ಎಂಬ

1. ಅನುಬಂಧ-01: ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳಿಗೆ ಶೇ.24.10% ರ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಟ್ಟಿರುವ ವಲಯವಾರು ಅನುದಾನದ ವಿವರ
2. ಅನುಬಂಧ-02: ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳಿಗೆ ಶೇ.24.10% ರ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಟ್ಟಿರುವ ವಾರ್ಡ್‌ವಾರು ಅನುದಾನದ ವಿವರ
3. ಅನುಬಂಧ-04: ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರು, ಆರ್ಥಿಕವಾಗಿ ಹಿಂದುಳಿದ ವರ್ಗದವರು, ಸಾಮಾನ್ಯ ವರ್ಗದ ಅಡಿಯಲ್ಲಿ ಹಿರಿಯ ನಾಗರೀಕರು, ವಿಶೇಷ ಚೇತನರು, ಮಹಿಳೆಯರು ಹಾಗೂ ಟ್ರಾನ್ಸ್‌ಜೆಂಡರ್‌ಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಟ್ಟಿರುವ ಅನುದಾನದ ವಿವರ ಲಗತ್ತಿಸಿದೆ.

ಮೇಲ್ಕಂಡ ಅಂಶಗಳನ್ನೊಳಗೊಂಡ ಟಿಪ್ಪಣಿಯನ್ನು ಈ ಕಡತದೊಂದಿಗೆ ಲಗತ್ತಿಸಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸುವ ಕುರಿತು ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸಹಿಗಾಗಿ ಸಲ್ಲಿಸಲಾಗಿದೆ.

ಬಿ.ಬಿ.ಎಂ.ಪಿ. ಆಯುಕ್ತರ ಆಪ್ತ ಕಾರ್ಯಾಲಯ
ಸಂಖ್ಯೆ ಬಿ.ಎಸ್.ಆರ್. (ಸಿ)...2024...
ದಿನಾಂಕ 21-08-18

ಉಪ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾನ್ಯ ಆಯುಕ್ತರು

Commissioner
Bruhat Bengaluru Mahanagara Palike

Council Secretary

ಕ್ರಮ ಸಂಖ್ಯೆ 634
ದಿನಾಂಕ 21-08-18

ಗಾಮೂಪಿಕ ನ್ಯಾಯ ಸ್ಥಾಯ ಸಮಿತಿಯ
ವಿಷಯ ಸಂಖ್ಯೆ...ಪಿ.ಜಿ.ಆರ್...2018-19
ದಿನಾಂಕ...27.8.18...ರ ನಿರ್ಣಯವನ್ನು
ಪುಟ ಸಂಖ್ಯೆ.....ರಲ್ಲಿ ಲಗತ್ತಿಸಿ
ಮುಂದಿನ ಕ್ರಮಕ್ಕೆ ಸಲ್ಲಿಸಿದೆ.

ಕಾರ್ಯದರ್ಶಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ಮಾನ್ಯ ಆಯುಕ್ತರು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ಆಯುಕ್ತರಿಗೆ (ಕಲ್ಯಾಣಿ)

ಉಪ ಆಯುಕ್ತರು
(ಕಲ್ಯಾಣಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕಲ್ಯಾಣಿಗಳು (ಕೆರೆ/ಕುಂಟೆ) ರವರ ಕಛೇರಿ, ವಿ.ಪಿ.ಎಂ.ಸಿ. ಆವರಣದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಂಖ್ಯೆ ಪಿ.ಎಸ್.ಜಿ. ಬ್ಲಾಕ್ (ಕೆ) ಕಛೇರಿ

ಸಂಖ್ಯೆ: PR/ಕೆ43/18-19 ದಿನಾಂಕ: 11-05-19

(35) (36) (37) (38) ದಿನಾಂಕ 14/9/18

14/9/18